ದಿನಾಂಕಃ **20.03.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಎ ಎನ್ ಆರ್ ವಕೀಲರಿಂದಃ**

ಕೆ ಪಾತಪ್ಪ ನನ್ನ ತಾತನಾಗಬೇಕು. ದಿಃ 10.06.2002 ರಂದು ಕೆ ಪಾತಪ್ಪ ತೀರಿಕೊಂಡಿದ್ದಾರೆ ಎಂದು ಹೇಳಿದ್ದಿರಿ ಅವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಇತ್ತೀಚೆಗೆ ಬಂದಿದೆ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಒ ಎಸ್134/2005 ದಾವೆಯಲ್ಲಿ ಕೆ ಪಾತಪ್ಪ 1996 ನೇ ಇಸ್ವೀಯಲ್ಲಿ ಆಸ್ಪತ್ರೆಗೆಂದು ಮನೆಯಿಂದ ಹೋದವರು ಮರಳಿ ಮನೆಗೆ ಬಂದಿಲ್ಲ, ಅವರು ಜೀವಂತ ಇದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಅವರ ವಿಚಾರದಲ್ಲಿ ಹೇಳಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಂತರ 1 ನೇ ಪ್ರತಿವಾದಿ ದಿಃ 06.01.2008 ರಂದು ಕೆ ಪಾತಪ್ಪ ತೀರಿಕೊಂಡಿದ್ದಾರೆ ಎಂದು ಮರಣ ಪ್ರಮಾಣ ಪತ್ರ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಂತರ 17 ನೇ ಪ್ರತಿವಾದಿ ಜಯಪ್ಪ ರವರು 1 ನೇ ಪ್ರತಿವಾದಿ ವಿರುದ್ಧ ತಹಶೀಲ್ದಾರ್, ಎ.ಸಿ, ಡಿ.ಸಿ ರವರಿಗೆ ಸುಳ್ಳು ಮಾಹಿತಿ ಕೊಟ್ಟು ಕೆ ಪಾತಪ್ಪ ರವರ ಮರಣ ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ ಎಂದು ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಕೊಟ್ಟ ದೂರಿನ ವಿಚಾರಣೆ ಪೆಂಡಿಂಗ್ ಇದೆ ಎಂದರೆ ಸಾಕ್ಷಿ ಆ ಯಾವುದೇ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳು ನಮ್ಮ ಹಾಗೂ ಪ್ರತಿವಾದಿ 2 ರಿಂದ 33 ರವರ ಪಿತ್ರಾರ್ಜಿತ ಆಸ್ತಿಗಳ ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳು ಇನ್ನೂ ಭಾಗ ಆಗಿಲ್ಲ ಎಂದರೆ ಸರಿ. ನಿಮ ತಾಯಿಗೆ ಎಷ್ಟು ಭಾಗ ಬರಬೇಕು ಎಂದು ನಿಖರವಾಗಿ ಈ ದಾವೆಯಲ್ಲಿ ಕೇಳಿಲ್ಲ, ನಿಮ್ಮ ತಾಯಿಯ ಮಾತು ಕೇಳಿ ಸುಳ್ಳು ದಾವೆ ಹಾಕಿದ್ದಿರಿ ಎಂದರೆ ಸಾಕ್ಷಿ ಇಲ್ಲ, ನನ್ನ ತಾಯಿಗೆ ಬರಬೇಕಾದ ಭಾಗ ಕೇಳಿ ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ದಾವಾ

ಸ್ವತ್ತುಗಳ ಪಹಣಿಗಳು ಈಗಲೂ ಕೆಲವು ಜಂಟೀ ಇವೆ, ಖರೀದಿ ಮಾಡಿದ ಸ್ವತ್ತುಗಳು ಅವರವರ ಹೆಸನರಿನಲ್ಲಿ ಇವೆ. ಪಾತಣ್ಣನ ಮಕ್ಕಳಾದ ಹನುಮಂತಪ್ಪ, ಬೈಲಪ್ಪ, ತಿಮ್ಮಯ್ಯ ಮತ್ತು ಕೊಂಡಯ್ಯ ಇವರ ನಡುವೆ ಯಾವುದೇ ಭಾಗ ಆಗಿಲ್ಲ ಹಾಗಾಗಿ ಅವರು ಯಾವುದೇ ಸ್ವತ್ತುಗಳನ್ನು ಮಾರಾಟ ಮಾಡಲು ಹಕ್ಕು ಇಲ್ಲ ಎಂದರೆ ಸಾಕ್ಷಿ ಅವರ ಹಂಚಿಕೊಂಡು ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. ಕ್ರಯಪತ್ರದಲ್ಲಿ ನಮೂದು ಇರುವ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್‌ಬಂದಿ ಪ್ರಕಾರ ತಿಮ್ಮಯ್ಯನ ಭಾಗಕ್ಕೆ ಬಂದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ನನ್ನ ತಾಯಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಪಹಣಿಗಳಲ್ಲಿ ಕೆಲವು ಪ್ರತಿವಾದಿಯರ ತಂದೆಯ ಹೆಸರು ಮತ್ತು ಕೆಲವು ಪ್ರತಿವಾದಿಯರ ತಾತನ ಹೆಸರು ನಮೂದಾಗಿ ಬರುತ್ತಿದೆ ಎಂದರೆ ಸರಿ. ನಾನು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.